
# ನಾನು



ವಾಗೀಶ ಹೆಗಡೆ

ಚಾಟಿಯೇಟಿನಂತೆ ಇಗೋ
ನನ್ನ ಎರಡು ಮಾತು,
'ಸೀಸರನಿಗೊ ದೇವರಿಗೋ...'
ಎರಡೇ ಎರಡು ಮಾತು:
ನನ್ನಂಥವರಿಲ್ಲಿ ಬೇರೆ ಯಾರಾದರು ಇರುವರೆ?
ಎಲ್ಲಿದೆ ನನಗಾಸರೆ?

ಅಲೆಯಲೆಗಳ ಮೇಲೆ ಮೆಟ್ಟಂಗಾಲಿನಲ್ಲಿ
ಕುಣಿಕುಣಿಯುತ
ಕಡಲುಬ್ಬರವಿಳಿತದಂತೆ ಚಂದ್ರನ ಜೊತೆಗಾಡುತಿದ್ದೆ
ಓಹ್, ನಾನು ಕಡಲಿನಷ್ಟು ಕಿರಿದಾಗಿದ್ದಿದ್ದರೆ!
ನನ್ನ ಹಾಗೆ ಪ್ರೀತಿಸುವ ರೋಹಿಣಿಯೆಲ್ಲಿರುವಳು?
ಇಂಥ ಸಣ್ಣ ಆಕಾಶಕೆ ಎಂಥ ದೈತ್ಯಳವಳು!

ಓಹ್! ದಟ್ಟ ದರಿದ್ರ! ಅದೂ ಕೋಟ್ಯಧೀಶನಂತೆ!
ಆತ್ಮಕೆ ಹಣವೇನು ಮಹಾ!
ತೃಪ್ತಿಯಿರದ ಕಳ್ಳನೊಬ್ಬನಿದ್ದಾನದರೊಳಗೆ;
ಈ ಜಗತ್ತಿನೆಲ್ಲ ಕೋಲಾರಗಳ ಚಿನ್ನದಿಂದ
ತೃಪ್ತಿಯಿಲ್ಲ ನನ್ನ ದುರಾಶೆಗಳ ಮಂದೆಮಂದೆಗೆ!